ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುತ್ತಾ ಅವರ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಎಷ್ಟು ಸಲ ಟ್ರಿಪ್ ಹಾಕುತ್ತೇವೆ ಎನ್ನುವ ಬಗ್ಗೆ ಹೇಳಿದ್ದಾರೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಕೆಲವು ನ್ಯೂನತೆಗಳ ಬಗ್ಗೆ ಅವರು ಏನು ಹೇಳಿದ್ದಾರೆ, ಅದನ್ನು ಸರಿಪಡಿಸುವಂಥ ಜವಾಬ್ದಾರಿ ನನ್ನದಾಗಿರುತ್ತದೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ನಮ್ಮಲ್ಲಿ ಚಾಲಕರ ಕೊರತೆ ಇದೆ, ಅದರ ನಿವಾರಣೆ ಸಲುವಾಗಿ 600 ಚಾಲಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ನಾವು ತೀರ್ಮಾನವನ್ನೂ ತೆಗೆದುಕೊಂಡಿದ್ದೇವೆ. ಚಾಲಕರನ್ನು ನೇಮಕ ಮಾಡಿಕೊಂಡ ನಂತರ ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೋಗುವುದಕ್ಕೆ ನಾನು ಅಧಿಕಾರಿಗಳಿಗೆ ಆದೇಶ ನೀಡುತ್ತೇನೆ.

ಶ್ರೀ ಗಡ್ಡದೇವರಮಠ, ಗಡ್ಡಯ್ಯ, ಶಿವಮೂರ್ತಯ್ಯ: ಕಳೆದ 6 ತಿಂಗಳುಗಳಿಂದ ನಾವು ಅಲ್ಲಿರುವ ಜನರಿಗೆ ಸಮಾಧಾನವನ್ನು ಹೇಳಿಕೊಂಡು ಬರುತ್ತಿದ್ದೇವೆ. ಆದಷ್ಟು ತೀವ್ರವಾಗಿ ಈ ವ್ಯವಸ್ಥೆಯಾಗಲಿ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ. ನಾವು ಕೇಳಿದಾಗ ಕಂಡಕ್ಟರ್ ಹಾಗೂ ಚಾಲಕರ ಕೊರತೆ ಇರುವುದರ ಬಗ್ಗೆ ಅಲ್ಲಿನ ಅಧಿಕಾರಿಗಳು ಹೇಳಿಕೊಂಡು ಬರುತ್ತಿದ್ದಾರೆ. ಆದುದರಿಂದ ಎಷ್ಟು ದಿವಸಗಳಲ್ಲಿ ಅದನ್ನು ಸರಿಮಾಡುವುದಕ್ಕೆ ಸಾಧ್ಯವಿದೆ ಎನ್ನುವ ವಿಚಾರವನ್ನು ಅವರು ಹೇಳಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್: ಅಲ್ಲಿನ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಇರುವಂಥ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಈ ತಕ್ಷಣ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಶ್ರೀ ಹೆಚ್.ಸಿ.ಬಸವರಾಜುರವರೆ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಟೈಮ್ ಕೇಳಿದ್ದಾರೆ.

ಶ್ರೀ ಹೆಚ್.ಸಿ.ಬಸವರಾಜು: ಇದೇ ಅಧಿವೇಶನದಲ್ಲಿ ನನ್ನ ಪ್ರಶ್ನೆಗೆ ಉತ್ತರ ಬರುತ್ತದೆಯೇ?

ಅಧ್ಯಕ್ಷರು: ಮುಂದಿನವಾರ ಉತ್ತರ ಬರುತ್ತದೆ. They have to send it. There is no other option for them except sending the reply.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಂದ ಖರೀದಿಸಲಾದ ಬಿಡಿ ಭಾಗಗಳು.

336(2850)

ಶ್ರೀ ಎಸ್.ಅಂಗಾರ (ಸೂಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಓಡಿಸುತ್ತಿರುವ ವಾಹನಗಳ ದುರಸ್ತಿಗೆ (ರಿಪೇರಿ) ಒಂದು ವರ್ಷಕ್ಕೆ ಎಷ್ಟು ಮೊತ್ತದ ಬಿಡಿ ಭಾಗಗಳನ್ನು ಖರೀದಿಸಲಾಗಿದೆ, ಎಲ್ಲಿಂದ ಖರೀದಿಸಲಾಗಿದೆ, (ಪೂರ್ತಿ ವಿವರ ನೀಡುವುದು).

ಆ) ವಾಹನದ ದುರಸ್ತಿ(ರಿಪೇರಿ)ಗೆ ಬಿಡಿ ಭಾಗಗಳನ್ನು ಖರೀದಿಸುವರೇ ಯಾವ ಮಾನದಂಡದಲ್ಲಿ ಖರೀದಿಸಲಾಗಿದೆ? (ಪೂರ್ತಿ ವಿವರ ನೀಡುವುದು).

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

1) 1999-2000ದ ಸಾಲಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ಮೂರು ನಿಗಮಗಳು ಅಂದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವಾಹನಗಳ ದುರಸ್ತಿ ಹಾಗೂ ಉಸ್ತುವಾರಿಗಾಗಿ ಖರೀದಿಸಲಾದ ಬಿಡಿ ಭಾಗಗಳ ಮೌಲ್ಯ ರೂ.93.59 ಕೋಟಿಗಳಾಗಿದೆ. ಖರೀದಿಸಲಾದ ಬಿಡಿ ಭಾಗಗಳ ವಿವರಗಳ ಸಾರಾಂಶವನ್ನು ಅನುಬಂಧ-ಅ ದಲ್ಲಿ ನೀಡಲಾಗಿದೆ. ಬಿಡಿ ಭಾಗಗಳ ಖರೀದಿಯ ಮೌಲ್ಯಗಳ ವಿವರಗಳನ್ನು ಅನುಬಂಧ-ಆ ನಲ್ಲಿ ನೀಡಲಾಗಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ ಒಂದು ಕೇಂದ್ರ ಖರೀದಿ ಸಮಿತಿಯು ಅಸ್ತಿತ್ವದಲ್ಲಿದ್ದು, ಇದು ತನ್ನ ಮೂರು ನಿಗಮಗಳಿಗಾಗಿ ಎರಡು ಕೋಟಿಗಳಿಗಿಂತ ಹೆಚ್ಚಿನ ಮೌಲ್ಯದ ಖರೀದಿಯನ್ನು ಕೈಗೊಳ್ಳುತ್ತದೆ.

ಅಲ್ಲದೇ ಬೆಂಗಳೂರು ಮಹಾನಗರ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ ಇನ್ನೊಂದು ಕೇಂದ್ರ ಖರೀದಿ ಉಪ ಸಮಿತಿಯು ಅಸ್ತಿತ್ವದಲ್ಲಿದ್ದು, ಇದು ಎರಡು ಕೋಟಿಗಳವರೆಗೆ ಖರೀದಿಯನ್ನು ಕೈಗೊಳ್ಳುತ್ತದೆ. ಅಲ್ಲದೇ ಸಣ್ಣಪುಟ್ಟ ಜರೂರು ಖರೀದಿಗಾಗಿ ಆಯಾ ವಿಭಾಗೀಯ ನಿಯಂತ್ರಕರ ನೇತೃತ್ವದಲ್ಲಿ ಸ್ಥಳೀಯ ಖರೀದಿ ಸಮಿತಿಗಳು ಅಸ್ತಿತ್ವದಲ್ಲಿವೆ. ಖರೀದಿಗಳು ಈ ಕೆಳಗಿನ ನೀತಿ ಆಧಾರದ ಮೇಲೆ ಮಾಡಲಾಗುತ್ತದೆ.

ಅ) ಮಹತ್ವದ ವಸ್ತುಗಳಾದ ಬ್ರೇಕ್‌ಗಳು, ಸ್ಟೀರಿಂಗ್‌ಗಳು ಇವುಗಳನ್ನು ಮೂಲ ಉತ್ಪಾದಕರಿಂದ ಖರೀದಿಸುವುದು.

ಆ) ಇತರ ವಸ್ತುಗಳಾದ ಹೆಡ್‌ಲೈಟ್, ನಟ್, ಬೋಲ್ಟ್, ವಿದ್ಯುತ್ ವಸ್ತುಗಳು ಇತ್ಯಾದಿಗಳನ್ನು ಎಎಸ್‌ಆರ್‌ಟಿಯು ರೇಟ್ ಕಾಂಟ್ರಾಕ್ಟ್ ಮೂಲಕ ಖರೀದಿಸುವುದು.

ಇ) ಇತರ ವಸ್ತುಗಳೆಂದರೆ, ಗೇರ್‌ಗಳು, ಬೇರಿಂಗ್ ಇತ್ಯಾದಿಗಳನ್ನು ನೋಂದಾಯಿತ

ಪೂರೈಕೆದಾರರಿಂದ ಸ್ಪರ್ಧಾತ್ಮಕ ಪ್ರಸ್ತಾವಗಳ ಮೂಲಕ ಖರೀದಿಸುವುದು.

ಸ್ವೀಕರಿಸಲಾದ ಪ್ರಸ್ತಾವಗಳನ್ನು ಹಣಕಾಸಿನ ಔಚಿತ್ಯದ ನೀತಿ ಆಧಾರದ ಪರಿಶೋಧನೆಯೊಂದಿಗೆ ಈ ವಸ್ತುಗಳ ಗುಣಮಟ್ಟ ಹಾಗೂ ಬಿಡ್ಡುದಾರನ ಹಿಂದಿನ ನಿರ್ವಹಣೆ ಆಧಾರದ ಮೇಲೆ ಮಾಡಲಾಗುತ್ತದೆ.

ಅನುಬಂಧ 'ಅ'

ಕರಾರಸಾ ಸಂಸ್ಥೆಯಲ್ಲಿ ವಾಹನಗಳ ದುರಸ್ತಿಗಾಗಿ 1999-2000ನೇ ಸಾಲಿನಲ್ಲಿ ಖರೀದಿಸಿದ ಸಾಮಗ್ರಿಗಳ ವಿವರ(ಸಾಮಗ್ರಿಗಳ ಬಗೆ)

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಸಾಮಗ್ರಿಗಳು	ಮೌಲ್ಯ	ಶೇಕಡ
1	ಆಟೋ ಬಿಡಿಭಾಗಗಳು	3237.47	ಶೇ. 35
2	ಟೈರು, ಟ್ಯೂಬು, ಫ್ಲಾಪ್‌ಗಳು	3398.55	ಶೇ. 36
3	ಟೈರು ರೀಟ್ರೇಡಿಂಗ್ ಸಾಮಗ್ರಿಗಳು	1877.94	ಶೇ. 20
4	ಬ್ಯಾಟರಿಗಳು	438.63	ಶೇ. 4
5	ಇತರೆ ಬಳಕೆ ಸಾಮಗ್ರಿಗಳು	406.41	ಶೇ. 4
	ಒಟ್ಟು ಮೊತ್ತ	9359.00	ಶೇ. 100

ಅನುಬಂಧ 'ಆ'

ಕರಾರಸಾ ಸಂಸ್ಥೆಯಲ್ಲಿ ವಾಹನಗಳ ದುರಸ್ತಿಗಾಗಿ 1999-2000ನೇ ಸಾಲಿನಲ್ಲಿ ಖರೀದಿಸಿದ ಸಾಮಗ್ರಿಗಳ ವಿವರ (ಸರಬರಾಜುದಾರರ ಬಗೆ)

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಸರಬರಾಜುದಾರರ ಬಗ್ಗೆ	ಮೌಲ್ಯ	ಶೇಕಡಾ
1	ಸರ್ಕಾರಿ ಮತ್ತು ಸಾರ್ವಜನಿಕ ವಲಯಗಳ ಉತ್ಪಾದಕರಿಂದ	2782.19	ಶೇ.30
2	ರಾಜ್ಯದಲ್ಲಿ ಸ್ಥಾಪಿತವಾದ ಸಣ್ಣ ಕೈಗಾರಿಕೆ, ದರ ಒಪ್ಪಂದ, ಮೂಲಸಾಮಗ್ರಿ ಉತ್ಪಾದಕರಿಂದ, ಉತ್ಪಾದಕರಿಂದ	2475.98	ಶೇ.26
3	ಹೊರ ರಾಜ್ಯದಲ್ಲಿ ಸ್ಥಾಪಿತ ಸಣ್ಣ ಕೈಗಾರಿಕೆ, ದರ ಒಪ್ಪಂದ, ಮೂಲಸಾಮಗ್ರಿ ಉತ್ಪಾದಕರಿಂದ, ಉತ್ಪಾದಕರಿಂದ	3819.29	ಶೇ.41
4	ಇತರೆ ಸರಬರಾಜುದಾರರಿಂದ	282.24	ಶೇ.3
	ಒಟ್ಟು	9359.70	ಶೇ.100

ANNEXURE A

DETAILS OF PURCHASES BY KSRTC FOR REPAIRS AND MAINTENANCE OF VEHICLES DURING THE YEAR 1999-2000 (ITEM VICE)

Sl.No.	Item Discription	TOTAL(IN Rs.Lakhs)	%
1	Auto Spares	3237.47	35%
2	Tyre, Tube, Flaps	3398.55	36%
3	Tyre retread materials	1877.94	20%
4	Batteries	438.63	4%
5	Other Consumables	406.41	4%
	Total	9359.00	100%

ANNEXURE B

DETAILS OF PURCHASES BY KSRTC FOR REPAIRS AND MAINTENANCE OF VEHICLES DURING THE YESR 1999-2000(SOURCEWISE)

Sl.No.	SUPPLIER PARTICULARS	TOTAL (In Rs. Lakhs)	%
1	FROM GOVT/PUBLIC SECTOR UNDERTAKING	2782.19	30%
2	FROM STATE BASED RATE CONTRACT, ORIGINAL EQUIPMENT MANUFACTURER, SSI AND MANUFACTURERS	2475.98	26%
3	FROM OUTSIDE STATE RATE CONTRACT, ORIGINIAL EQUIPMENT MANUFACTURER, SSI AND MANUFACTURERS	3819.29	41%
4	FROM OTHER SOURCES	282.24	3%
	TOTAL	9359.70	100%

ಶ್ರೀ ಎಸ್.ಅಂಗಾರ್: ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಓಡಿಸಿರುವ ವಾಹನಗಳ ದುರಸ್ತಿಗೆ ಒಂದು ವರ್ಷಕ್ಕೆ ಎಷ್ಟು ಮೊತ್ತದ ಬಿಡಿಭಾಗಗಳನ್ನು ಖರೀದಿಸಲಾಗಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. '1999-2000ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ಮೂರು ನಿಗಮಗಳಿಂದ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ, ವಾಹನಗಳ ದುರಸ್ತಿಗೆ ಹಾಗೂ ಉಸ್ತುವಾರಿಗಾಗಿ ತರಿಸಲಾಗಿರುವ ಬಿಡಿಭಾಗಗಳ ಒಟ್ಟು ಮೌಲ್ಯ 93.59 ಕೋಟಿ ರೂಪಾಯಿಗಳು' ಎಂದು ಮಾನ್ಯ ಸಾರಿಗೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬರುವಂಥ ಆದಾಯದ ಎಷ್ಟು ಭಾಗವನ್ನು ಈ ದುರಸ್ತಿಗಾಗಿ ಖರ್ಚು ಮಾಡಲಾಗಿದೆ ಎನ್ನುವಂಥ ಉತ್ತರವನ್ನು ಅವರು ಕೊಡಬೇಕು.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಕೇಳಿರುವಂಥ ಪ್ರಶ್ನೆಗೆ ನಾನು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದೇನೆ. ಆಯಾ ವರ್ಷದಲ್ಲಿ ಬರುವಂಥ ಆದಾಯದ ಮೇಲೆ ಎಷ್ಟು ಖರ್ಚಾಗುತ್ತದೆ ಎನ್ನುವ ವಿಚಾರವನ್ನು ಈ ಸಾರಿಗೆ ಇಲಾಖೆಯಲ್ಲಿ ಹೇಳುವಂಥದ್ದು ಕಷ್ಟವಾಗುತ್ತದೆ. ಏಕೆಂದರೆ, ಒಂದು ವಾಹನ ಯಾವ ಸಂದರ್ಭದಲ್ಲಿ ಯಾವಾಗ ದುರಸ್ತಿಗೆ ಬರುತ್ತದೆ ಎನ್ನುವ ವಿಚಾರವನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. 1999-2000ನೇ ಸಾಲಿಗೆ ನಾವು ಖರೀದಿ ಮಾಡಿರುವ ಮೊತ್ತ ಎಷ್ಟು ಎಂದು ಕೇಳಿದ್ದಕ್ಕೆ 93-59 ಕೋಟಿ ರೂಪಾಯಿಗಳು ಎಂದು ಹೇಳಲಾಗಿದೆ. ಅದರ ಜೊತೆಗೆ ಖರೀದಿ ಮಾಡುವ ವ್ಯವಸ್ಥೆ ಯಾವ ರೀತಿಯಾಗಿದೆ ಎನ್ನುವ ಮಾಹಿತಿಯನ್ನು ಕೇಳಿದ್ದಾರೆ, ಎಲ್ಲಾ ಮಾಹಿತಿಯನ್ನು ನಾವು ಒದಗಿಸಿ ಕೊಟ್ಟಿದ್ದೇವೆ. ಆ ಮಾಹಿತಿಯ ಪ್ರಕಾರ ನಾವು ಮಂಡಲಿಯ ಕಾಯಿದೆ ಪ್ರಕಾರ ಖರೀದಿ ಮಾಡಿರುತ್ತೇವೆ. ಆ ವಿಚಾರ ಬಿಟ್ಟು ನಾವು ಬೇರೆ ರೀತಿಯಲ್ಲಿ ಖರ್ಚು ಮಾಡುತ್ತಿಲ್ಲವೆನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಎಸ್.ಅಂಗಾರ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂಥ ಪ್ರಶ್ನೆಗೆ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆ ಪ್ರಶ್ನೆಗೆ ಪೂರಕವಾಗಿ ನಾವು ಉಪ-ಪ್ರಶ್ನೆಯನ್ನು ಕೂಡ ಕೇಳುತ್ತೇವೆ. ಅದಕ್ಕೂ ಸಹ ಅವರು ನನಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ನಾವು ಕೇಳಿರತಕ್ಕಂಥ ಪ್ರಶ್ನೆಗಳಿಗೆ ನೀವು ಕೊಟ್ಟಿರತಕ್ಕಂಥ ಉತ್ತರವನ್ನು ಪಡೆದುಕೊಂಡು ಇಲ್ಲಿ ಪ್ರಶ್ನೆ ಕೇಳಿದರೆ ಅದಕ್ಕೆ ಏನು ಅರ್ಥವಿದೆ? ನನ್ನ ಅನಿಸಿಕೆ ಇಷ್ಟೇ; 93.59 ಕೋಟಿ ರೂಪಾಯಿಗಳು ಮೊತ್ತದ ಬಿಡಿ ಭಾಗಗಳನ್ನು ಖರೀದಿ ಮಾಡಿ ಕರ್ನಾಟಕ ರಾಜ್ಯದಲ್ಲಿ ಓಡಿಸಿರುವ ಎಲ್ಲಾ ವಾಹನಗಳಿಗೆ ನೀವು ಸಾಮಗ್ರಿಗಳನ್ನು ಕೊಡುತ್ತೀರಿ. ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಮತಕ್ಷೇತ್ರದ ಸುಳ್ಯ ತಾಲ್ಲೂಕಿನಲ್ಲಿ ಬರತಕ್ಕಂಥ 60 ರೂಟ್‌ಗಳಲ್ಲಿ ಬಸ್‌ಗಳು ಸಂಚರಿಸುತ್ತವೆ. ಇಷ್ಟು ಮೊತ್ತದ ಬಿಡಿಭಾಗಗಳನ್ನು ಖರೀದಿ ಮಾಡಿದರೂ

ಕೂಡ ಬಸ್ ಅರ್ಧ ದಾರಿಯಲ್ಲಿಯೇ ನಿಲ್ಲುತ್ತವೆ. ಅದಕ್ಕೆ ಕಾರಣ ಏನು? ಏಕೆಂದರೆ ನನಗೆ ಸಂಶಯ ಬರುತ್ತದೆ. ಖರೀದಿ ಮಾಡಿರುವ ಬಿಡಿಭಾಗಗಳು ಏನಿವೆ, ಆ ಡಿಪೋ ಅಥವಾ ವಿಭಾಗದಲ್ಲಿ ಇರಬಹುದು, ಆ ಬಿಡಿಭಾಗಗಳು ಆ ವಾಹನಗಳಿಗೆ ಸರಿಯಾಗಿ ಉಪಯೋಗವಾಗುತ್ತಿಲ್ಲ. ಸರಿಯಾಗಿ ಉಪಯೋಗಿಸಿದರೆ ಅರ್ಧಕ್ಕೆ ಬಸ್ ನಿಲ್ಲುವ ವ್ಯವಸ್ಥೆ ಬರುವುದಿಲ್ಲ, ಆ ಉದ್ದೇಶವನ್ನು ಇಟ್ಟುಕೊಂಡು ನಾನು ಈ ಪ್ರಶ್ನೆಯನ್ನು ಕೇಳಿರುತ್ತೇನೆ. ಅದಕ್ಕಾಗಿ ತಾವು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಸನ್ಮಾನ್ಯ ಅಧ್ಯಕ್ಷರೆ, ವಿಭಾಗೀಯ ನಿಯಂತ್ರಣಾಧಿಕಾರಿಗಳ ವ್ಯಾಪ್ತಿಗೆ ಬರುವಂಥ ವಾಹನಗಳ ದುರಸ್ತಿಗಾಗಿ 5 ಲಕ್ಷ ರೂಪಾಯಿಗಳ ಮೊತ್ತದವರೆಗೆ ಬಿಡಿಭಾಗಗಳನ್ನು ಖರೀದಿ ಮಾಡುವುದಕ್ಕೆ ಅಧಿಕಾರವನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಪೆಚ್ಚಿನ ಒಂದು ಮೊತ್ತದ ಬಿಡಿ ಭಾಗಗಳನ್ನು ಖರೀದಿ ಮಾಡುವ ಅಧಿಕಾರ ಅವರಿಗೆ ಇಲ್ಲದಿದ್ದರೂ ಸಹ ತಕ್ಷಣವೇ ವಾಹನಗಳ ದುರಸ್ತಿಯ ಅಗತ್ಯತೆ ಬಿದ್ದಾಗ ಕೊಂಡುಕೊಳ್ಳಲು ಅವರಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಮಾನ್ಯ ಶಾಸಕರು ಹೇಳಿದಂತೆ, ಅಲ್ಲಿರುವ ತೊಂದರೆ ನಿವಾರಣೆಯಾಗಬೇಕಾದರೆ, ಬಿಡಿಭಾಗಗಳನ್ನು ಖರೀದಿ ಮಾಡಿ ಅದನ್ನು ಉಪಯೋಗ ಮಾಡದೇ ಪ್ರಯಾಣಿಕರಿಗೆ ಅದರಿಂದ ಅನಾನುಕೂಲವಾಗುತ್ತದೆ ಎನ್ನುವ ವಿಚಾರವನ್ನು ಅವರು ನನ್ನ ಗಮನಕ್ಕೆ ತಂದಿದ್ದಾರೆ; ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ನಾನು ತಕ್ಷಣ ನಮ್ಮ ಅಧಿಕಾರಿಗಳನ್ನು ಕಳುಹಿಸಿ, ಅಲ್ಲಿಯ ಪರಿಸ್ಥಿತಿಯನ್ನು ವೀಕ್ಷಿಸಿ, ಏನೇನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿಸಿಕೊಡುತ್ತೇನೆ.

ಪುತ್ತೂರು ಎಪಿಎಂಸಿಯ ಚುನಾವಣೆ.

337(2054)

ಶ್ರೀ ಡಿ.ಪಿ.ಸದಾಂದಗೌಡ(ಪುತ್ತೂರು): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಎಪಿಎಂಸಿ ಪ್ರಾರಂಭವಾಗಿ 3ವರ್ಷವಾದರೂ ಚುನಾವಣೆ ಆಗಿಲ್ಲ; ಅದಕ್ಕೆ ಕಾರಣಗಳೇನು?

ಆ) ಚುನಾವಣೆ ಎಂದು ನಡೆಸಲಾಗುವುದು?

ಇ) ರೈತರು ಎರಡೆರಡು ಕಡೆ ಎಪಿಎಂಸಿ ಶುಲ್ಕ ಪಾವತಿಸಬೇಕೆ?

ಈ) ರಾಜ್ಯದಲ್ಲಿರುವ ಒಟ್ಟು ಎಪಿಎಂಸಿ ಯಾರ್ಡ್‌ಗಳು ಎಷ್ಟು?